

# ಭೃಗುವಾಣಿ

ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 32 | ಜುಲೈ – ಸೆಪ್ಟೆಂಬರ್ 2019 | ರೂ. 10/– | ಸಂಚಿಕೆ 02

## ವೈವಿಧ್ಯಮಯ ಪ್ರತಿಭಾ ಮೇಳ







## ಸಂಭ್ರಮದ ದುರ್ಗಾ ನಮಸ್ಕಾರ



## ವೈಭವದ ಗಣೇಶೋತ್ಸವ



### ಗಮನಿಸಿ

- ತುಳಸಿ ಸಂಕೀರ್ತನೆ : 7.11.2019
- ಆನಂದಬಳಗ ಬ್ಯಾಡ್ಮಿಂಟನ್ ಲೀಗ್ : 17.11.2019
- ಕ್ಯಾಲೆಂಡರ್ ಬಿಡುಗಡೆ : 14.12.2019
- ಆನಂದ ಮಿಲನ 2020 : 5.1.2020
- ಕ್ರೀಡಾ ಮಿಲನ 2020 : 19.1.2020

*With best compliments from :*

# TEDMAG
# ENGINEERING & MANAGEMENT CONSULTANTS (P) LTD.

**SWAGAT, 1209, 11th CROSS,**
**HSR LAYOUT SECTOR I,**
**BANGALORE – 560 102.**

**TEL.: +91 (0)80 22586129**
**FAX: +91 (0)80 22589134**

**E-mail:**
**Bangalore : tedmagemc@hotmail.com**
**sridhar_bhat@yahoo.com**
**Chennai : myram47@gmail.com**
**Mumbai : mindi1940@yahoo.com**

- MILK PROCESSING
- FOOD PROCESSING
- PLANT TISSUE CULTURE
- ALLIED INDUSTRIES

Start the day feeling .....



.......Light & comfortable




**For sure relief from CONSTIPATION use...**

**Dosage:**
Anuloma DS Tablets - 1 to 2 tablets at bedtime with warm water

**Dosage:**
Anuloma Churna - ½ to 1 teaspoonful at bedtime with warm water.

With best compliments from the manufacturers of:

Anuloma®
DS Tab and Churna

For Safe and Sure relief from Constipation




BPRL Since 1950

SAGAR PHARMACEUTICALS
Herbal Healthcare Division of BPRL PVT. LTD.

Sagar Since 1975

No.163, Reservoir Street, Basavanagudi, Bangalore - 560 004. INDIA. Consumer Care No.: 080-41208661 Website: www.sagarpharma.in

Bhruguvani (July-Sep 2019) Regd. with RNI under No.KARKAN/2012/45587 No. of Pages : 32 (28+4)




If undelivered please return to:
**Ananda Balaga**
Hotel Ajantha Complex, 22A, M.G. Road
Bengaluru - 560 001
Phone : 2559 4457

Published by Smt. Geetha.V.Rao, President, Ananda Balaga, Bengaluru - 560 001 Printed by Omkar Offset Printers, Bengaluru - 02

ಭೃಗುವಾಣಿ
ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 32 ಸಂಚಿಕೆ 02

ಅಧ್ಯಕ್ಷರು :
ಗೀತಾ ವಾಸುದೇವ ರಾವ್

ಕಾರ್ಯದರ್ಶಿ :
ಎಸ್. ಹರಿದಾಸ ಉಪಾಧ್ಯ

ಸಂಪಾದಕರು :
ಎಂ. ಸತ್ಯನಾರಾಯಣ ಭಟ್

ಸಂಪಾದಕ ಮಂಡಳಿ :
ಹರಿದಾಸ ಮುನ್ನೂರು
ಬಿ. ರಾಮದಾಸ ತಂತ್ರಿ
ಡಿ. ಶರತ್ ಕುಮಾರ ಭಟ್
ಕೆ.ಎನ್. ಅಡಿಗ
ರಂಜಿತ್ ಯಡಪಾಡಿತ್ತಾಯ
ವೈ. ಜಯಂತರಾವ್
ಟಿ.ಎಸ್. ನಾಗರಾಜ ಉಪಾಧ್ಯಾಯ

ಸಲಹೆಗಾರರು :
ಶ್ರೀಮತಿ ವಿಜಯಲಕ್ಷ್ಮಿ ಭಟ್

ಜಾಹೀರಾತು ಸಮನ್ವಯ :
ಶ್ರೀ ವೈ. ರಾಧಾಕೃಷ್ಣ
ಶ್ರೀ ಬಿ.ಎಸ್. ಬಾಲಚಂದ್ರ ತೋಳ್ಪಾಡಿ

ಛಾಯಾಚಿತ್ರಗಳು
ಕೆ. ಬಾಲಕೃಷ್ಣ ಉಪಾಧ್ಯಾಯ
ಮಟ್ಟಿ ರಾಮಚಂದ್ರರಾವ್

ವಿಳಾಸ :
ಆನಂದ ಬಳಗ
ಹೋಟೆಲ್ ಅಜಂತಾ ಆವರಣ
22ಎ, ಎಂ.ಜಿ. ರಸ್ತೆ
ಬೆಂಗಳೂರು – 560 001
ದೂರವಾಣಿ : 2559 4457

Website:
www.anandabalaga.org

# ಅಧ್ಯಕ್ಷರ ಮಾತು



ಸಹೃದಯ ಸದಸ್ಯ ಬಾಂಧವರೇ,

ನಾಡ ಹಬ್ಬ ದಸರಾ ಮುಗಿದು, ಇದೀಗ ದೀಪಾವಳಿಯ ಸಡಗರ ಆರಂಭವಾಗಿದೆ. ತಮಗೆಲ್ಲಾ ಬೆಳಕಿನ ಹಬ್ಬ ದೀಪಾವಳಿ ಹೊಸ ಸಂತೋಷ, ಭರವಸೆ, ಯಶಸ್ಸುಗಳನ್ನು ತರಲಿ ಎಂಬ ಸದಾಶಯದೊಂದಿಗೆ ದೀಪಾವಳಿಯ ಶುಭಾಶಯಗಳನ್ನು ಸಲ್ಲಿಸುತ್ತಿದ್ದೇನೆ. ಕಳೆದ ತ್ರೈಮಾಸಿಕ ಅವಧಿ ನಮ್ಮ ಬಳಗದ ಮಟ್ಟಿಗೆ ಅತ್ಯಂತ ಚಟುವಟಿಕೆಯ ಅವಧಿಯಾಗಿದ್ದು, ಇದಕ್ಕೆ ಕಾರಣಕರ್ತರಾದ ಎಲ್ಲಾ ಉಪ ವಿಭಾಗದ ಸಂಚಾಲಕರಿಗೆ ಮತ್ತು ಅವರ ಕಾರ್ಯ ತಂಡಕ್ಕೆ ಅಭಿನಂದನೆಗಳು ಸಲ್ಲಲೇ ಬೇಕು. ಸಾಂಸ್ಕೃತಿಕ ವಿಭಾಗದವರು ಏರ್ಪಡಿಸಿದ್ದ ಮಕ್ಕಳ ಪ್ರತಿಭಾ ಸ್ಪರ್ಧೆಯು ನಮ್ಮ ಮಕ್ಕಳಲ್ಲಿರುವ ಪ್ರತಿಭೆಗಳ ಅನಾವರಣಕ್ಕೆ ಅವಕಾಶ ಮಾಡಿಕೊಟ್ಟರೂ, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಸ್ಪರ್ಧಿಗಳು ಭಾಗವಹಿಸಬೇಕಾದುದು ಅಪೇಕ್ಷಣೀಯ. ಇದೇ ವಿಭಾಗದವರು ಸಂಯೋಜಿಸಿದ್ದ ಪ್ರತಿಭಾ ಮೇಳ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವೂ ಯಶಸ್ವಿಯಾಗಿ ನಡೆದಿದ್ದು, ಅಂದು ಪುರಸ್ಕೃತರಾದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅಭಿನಂದನೆಗಳು. ನಮ್ಮ ಸದಸ್ಯರ ಕುಟುಂಬದ ವಿದ್ಯಾರ್ಥಿಗಳು ರಾಜ್ಯಮಟ್ಟದಲ್ಲಿ ರ್‍ಯಾಂಕ್‌ಗಳನ್ನು ಪಡೆದಿರುವುದು ನಮಗೆಲ್ಲಾ ಹೆಮ್ಮೆಯ ವಿಚಾರ. ಈ ಎಲ್ಲಾ ವಿದ್ಯಾರ್ಥಿಗಳ ಮುಂದಿನ ವಿದ್ಯಾಭ್ಯಾಸ ಯಶಸ್ವಿಯಾಗಿ ಸಾಗಲಿ ಎಂದು ನಮ್ಮ ಹಾರೈಕೆ. ವೃತ್ತಿಪರ ವ್ಯಾಸಂಗ ಮುಂದುವರಿಸಲು ಆರ್ಥಿಕವಾದ ನೆರವು ಏನಾದರೂ ಅಗತ್ಯಬಿದ್ದರೆ ಬಳಗದ ವ್ಯಾಸಂಗ ಸಹಾಯ ಯೋಜನೆಯ ಮೂಲಕ ನೆರವನ್ನು ಈ ವಿದ್ಯಾರ್ಥಿಗಳು ಪಡೆಯಬಹುದಾಗಿದೆ. ಇದೇ ಅವಧಿಯಲ್ಲಿ ಧಾರ್ಮಿಕ ವಿಭಾಗದ ನೇತೃತ್ವದಲ್ಲಿ ನಡೆದ ದುರ್ಗಾ ನಮಸ್ಕಾರ, ಯುವ ವಿಭಾಗದವರು ಸಂಯೋಜಿಸಿರುವ ಗಣೇಶೋತ್ಸವ ನಮ್ಮ ಸದಸ್ಯರಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಬೆಳೆಸುವಲ್ಲಿ ಸಹಕಾರಿಯಾಗಿದೆ. ಸಂಕಲ್ಪ–ಸಿದ್ಧಿ ಮತ್ತು ಗುರಿ ಸಾಧನೆಯ ಬಗ್ಗೆ ಯುವ ವಿಭಾಗದವರು ಏರ್ಪಡಿಸಿದ್ದ ಒಂದು ದಿನದ ವಿಚಾರ ಸಂಕಿರಣವು ಹೊಸ ಪ್ರಯೋಗವಾಗಿದ್ದು, ಇಂತಹ ಕಾರ್ಯಕ್ರಮಗಳು ಇನ್ನಷ್ಟು ನಡೆಯಬೇಕಾಗಿದೆ.

ನಮ್ಮ ಬಳಗದ ವಾರ್ಷಿಕ ಸರ್ವ ಸದಸ್ಯರ ಸಭೆಯು ದಿ. 15.9.2019 ರಂದು ವಿದ್ಯುಕ್ತವಾಗಿ ನಡೆದಿದೆ. ಕಳೆದ ವರ್ಷದ ಕಾರ್ಯಚಟುವಟಿಕೆಗಳ ಬಗ್ಗೆ ಸದಸ್ಯರು ಸಂತಸ ವ್ಯಕ್ತಪಡಿಸಿದ್ದಾರೆ ಜೊತೆಗೆ ಕೆಲವೊಂದು ಸಲಹೆ–ಸೂಚನೆಗಳನ್ನು ನೀಡಿರುತ್ತಾರೆ. ಸೂಕ್ತವಾದ ಸಲಹೆಗಳನ್ನು ಮುಂದಿನ ದಿನಗಳಲ್ಲಿ ಅಳವಡಿಸಲು ಯತ್ನಿಸಲಾಗುವುದು. ಬಳಗದ ಕಾರ್ಯಕಾರಿ ಸಮಿತಿಯ ಐದು ಸದಸ್ಯರು 31.3.2020 ರಂದು ತಮ್ಮ ಆರು ವರ್ಷಗಳ ಅವಧಿಯನ್ನು ಮುಗಿಸಿ, ನಿವೃತ್ತಿಯಾಗಲಿದ್ದು ಈ ಸ್ಥಾನಕ್ಕೆ ಹೊಸ ಸದಸ್ಯರ ಆಯ್ಕೆ ಪ್ರಕ್ರಿಯೆಯೂ ನಡೆದಿದೆ. ಸನ್ಮಾನ್ಯರಾದ ಶ್ರೀ ಬಾ. ರಾಮಚಂದ್ರ ಉಪಾಧ್ಯ, ಶ್ರೀ ಎಂ.ಕೆ. ಗುರುಮೂರ್ತಿ ಮತ್ತು ಶ್ರೀ ಸಂದೀಪರಾವ್ ಪುನರಾಯ್ಕೆ ಆದರೆ ಶ್ರೀ ಪಿ.ಎನ್. ವಿಷ್ಣುಮೂರ್ತಿ ಕುದ್ದಣ್ಣಾಯ ಮತ್ತು ಶ್ರೀ ಟಿ.ಎಸ್. ನಾಗರಾಜ ಉಪಾಧ್ಯರವರು ಹೊಸದಾಗಿ ಸಮಿತಿಗೆ ಸೇರ್ಪಡೆಯಾಗಿದ್ದಾರೆ. ಇವರಿಗೆಲ್ಲಾ ನನ್ನ ಅಭಿನಂದನೆಗಳು.

ಬಳಗದ ಕಾರ್ಯಕಾರಿ ಸಮಿತಿಯಲ್ಲಿ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದ ಶ್ರೀಮತಿ ಕಸ್ತೂರಿ ಐತಾಳ್ ಮತ್ತು ಶ್ರೀ ವೈ. ರಾಧಾಕೃಷ್ಣ ಸಮಿತಿಯಿಂದ ನಿರ್ಗಮಿಸಿದ್ದಾರೆ. ಇವರ ಅನುಪಮ ಸೇವೆಗಾಗಿ ಬಳಗ ಸದಾ ಆಭಾರಿಯಾಗಿರುತ್ತದೆ.

ಮುಂದಿನ ದಿನಗಳಲ್ಲಿ ಬಳಗದಲ್ಲಿ ಮತ್ತಷ್ಟು ಕಾರ್ಯಚಟುವಟಿಕೆಗಳು ನಡೆಯಲಿವೆ. ಈ ಎಲ್ಲಾ ಸಂದರ್ಭಗಳಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಪಾಲ್ಗೊಂಡು, ಕಾರ್ಯಕ್ರಮಗಳ ಯಶಸ್ಸಿಗೆ ಸಹಕರಿಸಬೇಕಾಗಿ ಕೋರುತ್ತೇನೆ.

ಹಾರ್ದಿಕ ಶುಭಾಶಯಗಳೊಂದಿಗೆ,

– ಗೀತಾ ವಾಸುದೇವರಾವ್

**Executive Committee Members : 2018-2020**

| Name | Contact Numbers |
|---|---|
| ***President*** | |
| Geetha Vasudeva Rao | 98808 99997 |
| ***Vice President*** | |
| B. Ramachandra Upadhya | 99024 00072 |
| Smt. Vijayalakshmi Bhat S. | 98441 52107 |
| ***Secretary*** | |
| S. Haridas Upadhya | 94480 01892 |
| ***Joint Secretary*** | |
| A. Sandeep Rao | 98450 98150 |
| ***Treasurer*** | |
| Y. Radhakrishna | 98440 58851 |
| ***Asst. Treasurer*** | |
| B.S. Balachandra Tolpadi | 94481 34268 |
| ***Convener, Cultural Wing*** | |
| H. Ramesh Bhat | 98450 24708 |
| ***Convener, Religious Wing*** | |
| Y. Jayantha Rao | 94482 74519 |
| ***Convener, Youth Wing*** | |
| M. Krishna Prasad | 98450 18183 |
| ***Convener, Edn. Assistance Program*** | |
| Sharath Chandra S.N. | 98860 40271 |
| ***Convener, Public Relation Wing*** | |
| K.N. Adiga | 94488 48154 |
| ***Convener, Membership Devt. Wing*** | |
| M.K. Gurumurthy | 98440 22692 |
| ***Convener, Community Services*** | |
| P.C. Rao | 98444 46309 |
| ***Convener, Media & Communications*** | |
| M. Dinesh Rao | 98456 88955 |
| ***Editor, Brughu Vani*** | |
| M. Sathyanarayana Bhat | 99458 02607 |
| ***Members*** | |
| Kasturi Aithal | 98803 98353 |
| ***Co-opted Members*** | |
| Geetha P.R. Rao | 99459 38411 |
| M Mohan Rao | 98453 79956 |
| Jayaprakash Mady | 98450 09669 |
| ***Permanent Invitees / Past Presidents*** | |
| P.S. Bagilthaya | 98440 83582 |
| K. Vasudeva Rao | 98450 57111 |
| UAP Ballal | 2226 7609 |
| STR Madi | 99029 77948 |
| ***Special Invitees*** | |
| T.S. Nagaraja Upadhyaya | 93412 26763 |
| Sudha M Rao | 99011 27738 |
| U V Krishna Murthy | 98440 24136 |
| Dr. (Smt.) Veena Sharath | 99860 80271 |
| Y. Sripathy Bhat | 65626972 |
| K. Gopala Krishna | 99801 28049 |
| Madhavi Ballal | 99860 39107 |


ಒಳಪುಟಗಳಲ್ಲಿ.....


| | | |
|---|---|---|
| ಅಧ್ಯಕ್ಷರ ಮಾತು | ... | 1 |
| ಸಾಮೂಹಿಕ ತುಳಸಿ ಸಂಕೀರ್ತನೆ | ... | 3 |
| ಆನಂದ ಮಿಲನ 2020 | ... | 4 |
| ಕ್ರೀಡಾ ಮಿಲನ 2020 | ... | 5 |
| ದೀಪ ದುರ್ಗಾ ನಮಸ್ಕಾರ | ... | 6 |
| ಸಡಗರದ ಗಣೇಶೋತ್ಸವ | ... | 7 |
| ಸಂಕಲ್ಪ ಸಿದ್ಧಿ – ವಿಚಾರ ಸಂಕಿರಣ | ... | 9 |
| ವೈವಿಧ್ಯಮಯ ಪ್ರತಿಭಾ ಮೇಳ | ... | 11 |
| 31ನೇ ವಾರ್ಷಿಕ ಸಭೆ | ... | 17 |
| ಹೊಸ ಸದಸ್ಯರಿಗೆ ಸ್ವಾಗತ | ... | 20 |
| ಪುತ್ತಿಗೆ ಶ್ರೀಪಾದರ ಚಾತುರ್ಮಾಸ್ಯ | ... | 21 |
| ದ.ಕ. ಸಂಘದ ಕರಾವಳಿ ರತ್ನ ಪ್ರದಾನ | ... | 22 |
| ಸುದ್ದಿ ಸಂಗ್ರಹ | ... | 23 |


ಭೃಗುವಾಣಿ ತ್ರೈಮಾಸಿಕದಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳ ಪೂರ್ಣ ಜವಾಬ್ದಾರಿಯು ಲೇಖಕರದ್ದೇ ಆಗಿರುತ್ತದೆ, ವಿನಹ ಸಂಪಾದಕ ಮಂಡಳಿಯದಲ್ಲ.

## ಸದಸ್ಯರಲ್ಲಿ ಮನವಿ


ಭೃಗುವಾಣಿ ನಿಮ್ಮ ಪತ್ರಿಕೆ. ನೀವು ಕಳುಹಿಸುವ ಲೇಖನ, ಕವನ, ಸಾಧನೆ–ಪರಿಚಯ, ಫೋಟೋಗ್ರಾಫ್, ಚುಟುಕು, ಹಾಸ್ಯ ಚಟಾಕಿ. ಮೊದಲಾದುವುಗಳಿಗೆ ಪ್ರಥಮ ಪ್ರಾಶಸ್ತ್ಯ. ಅದಲ್ಲದೆ ಸದಸ್ಯರ ಕುಟುಂಬದಲ್ಲಿ ನಡೆದ ಯಾವುದೇ ಸಮಾರಂಭದ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಅಥವಾ ಆಮಂತ್ರಣ ಪತ್ರಿಕೆಯನ್ನು ಕಳುಹಿಸಿದರೆ, ಸುದ್ದಿ–ಸಂಗ್ರಹ ಅಂಕಣದಲ್ಲಿ ಪ್ರಕಟಿಸಲು ಅನುಕೂಲ.

ಭೃಗುವಾಣಿ ಪತ್ರಿಕೆಯಲ್ಲಿ ನಿಮ್ಮದೂ ಪಾಲು ಇರಲಿ.. ಪ್ರಕಟಣೆಗೆ ಪರಿಗಣಿಸಲು ಲೇಖನ ಮತ್ತಿತರ ವಿಚಾರಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದಾಗಿದೆ :

**ಎಂ. ಸತ್ಯನಾರಾಯಣ ಭಟ್**
"ಕೃಷ್ಣ ಕೃಪಾ", 12/1, 5ನೇ ಮೈನ್, ಇಟ್ಟುಮಡು
ಬನಶಂಕರಿ 3ನೇ ಸ್ಟೇಜ್, ಬೆಂಗಳೂರು–560 085
E-mail: msbhat1958@gmail.com



## ಸಾಮೂಹಿಕ ತುಳಸಿ ಸಂಕೀರ್ತನೆ : 7.11.2019



ಆನಂದ ಬಳಗದ ಧಾರ್ಮಿಕ ವಿಭಾಗದ ನೇತೃತ್ವದಲ್ಲಿ
**ದಿನಾಂಕ 7.11.2019ರ ಗುರುವಾರ ಸಂಜೆ 6** ರಿಂದ
**ಸಾಮೂಹಿಕ ತುಳಸಿ ಸಂಕೀರ್ತನೆ** ಯನ್ನು
ಸಂಯೋಜಿಸಲಾಗಿದೆ.

ಬೆಂಗಳೂರು ನಗರದ ಶ್ರೀ ವಿಶ್ವೇಶ ತೀರ್ಥ ಸ್ವಾಮೀಜಿ ರಸ್ತೆಯಲ್ಲಿರುವ ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದ ಸಹಯೋಗದಲ್ಲಿ ವಿದ್ಯಾಪೀಠದ ಶ್ರೀಕೃಷ್ಣನ ಸನ್ನಿಧಿಯಲ್ಲಿ ನಡೆಯಲಿರುವ ಈ ಅಪರೂಪದ ಕಾರ್ಯಕ್ರಮದಲ್ಲಿ ಬಳಗದ ಸದಸ್ಯರು ಹಾಗೂ ವಿದ್ಯಾಪೀಠದ ವಿದ್ಯಾರ್ಥಿಗಳು ಅಮೋಘವಾದ ಶೈಲಿಯಲ್ಲಿ ತುಳಸೀ ಸಂಕೀರ್ತನೆ ಮಾಡಲಿದ್ದಾರೆ.

ದೀಪಾವಳಿ ಆಚರಣೆಯ ಅಂಗವಾಗಿ ದಶಮಿಯ ಸಾಯಂಕಾಲ ಹಮ್ಮಿಕೊಂಡಿರುವ ಸಂಕೀರ್ತನೆಯಲ್ಲಿ ಬಳಗದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕಾಗಿ ವಿನಂತಿ. (ಮಹಾಮಂಗಳಾರತಿ ನಂತರ ವಿಶೇಷ ಫಲಾಹಾರದ ವ್ಯವಸ್ಥೆಯನ್ನು ಮಾಡಲಾಗಿದೆ)

| | | |
|---|---|---|
| **ಶ್ರೀಮತಿ ಗೀತಾ ವಾಸುದೇವರಾವ್** | **ಎಸ್. ಹರಿದಾಸ ಉಪಾಧ್ಯ** | **ವೈ. ಜಯಂತ ರಾವ್** |
| ಅಧ್ಯಕ್ಷರು | ಕಾರ್ಯದರ್ಶಿ | ಸಂಚಾಲಕರು, ಧಾರ್ಮಿಕ ವಿಭಾಗ |
| | 94480 01892 | 94482 74519 |

## ಆನಂದ ಬಳಗದ ಕ್ಯಾಲೆಂಡರ್ 2020 ಬಿಡುಗಡೆ – ಪ್ರತಿಗಳನ್ನು ಪಡೆಯಲು ಕೋರಿಕೆ

ಆನಂದ ಬಳಗದ ಯುವವಿಭಾಗವು ಕಳೆದ ಕೆಲವು ವರ್ಷಗಳಿಂದ ಕ್ಯಾಲೆಂಡರ್‌ಗಳನ್ನು ಮುದ್ರಿಸಿ ಸದಸ್ಯರಿಗೆ ಒದಗಿಸಿಕೊಡುತ್ತಿದೆ. ಬಳಗದ ಕೆಲವು ಉದಾರೀ ದಾನಿಗಳ ಪ್ರಾಯೋಜಕತ್ವದಲ್ಲಿ ಹೊರತರುತ್ತಿರುವ ಈ ಕ್ಯಾಲೆಂಡರ್ ಬಳಗಕ್ಕೆ ಉಪಯುಕ್ತವಾದ ಮಾಹಿತಿಗಳನ್ನು ಒಳಗೊಂಡು, ವಿಶೇಷವಾದ ವಿನ್ಯಾಸದೊಡನೆ ಪ್ರತಿವರ್ಷವೂ ಪ್ರಕಟಣೆಗೊಳ್ಳುತ್ತಿದೆ.

ಆನಂದ ಬಳಗದ ಕ್ಯಾಲೆಂಡರ್‌ಗಳು ಸದಸ್ಯರಿಗೆ ಹೊಸ ವರ್ಷ ಆರಂಭವಾಗುವ ಸಾಕಷ್ಟು ಮುಂಚಿತವಾಗಿ ಲಭ್ಯವಾಗುವ ದೃಷ್ಟಿಯಿಂದ ಬಳಗದ 2020ರ ಕ್ಯಾಲೆಂಡರ್‌ನ್ನು ದಿನಾಂಕ 14.12.2019ರ ಶನಿವಾರ ಸಂಜೆ 6 ಗಂಟೆಗೆ ಹೋಟೆಲ್ ಅಜಂತಾ ಆವರಣದಲ್ಲಿ ಬಿಡುಗಡೆ ಮಾಡಲಾಗುವುದು.

ಅಂದು ಬಿಡುಗಡೆಯಾದ ಕ್ಯಾಲೆಂಡರ್‌ಗಳ ಪ್ರತಿಗಳನ್ನು ಬಳಗದ ಎಲ್ಲಾ ಸದಸ್ಯರು ಈ ಕೆಳಗಿನ ವಿಳಾಸಗಳಲ್ಲಿ, ತಮ್ಮ ಸದಸ್ಯತ್ವ ಸಂಖ್ಯೆಯನ್ನು ನಮೂದಿಸಿ ಆದಷ್ಟು ಶೀಘ್ರದಲ್ಲಿ ಪಡೆದುಕೊಳ್ಳಬೇಕಾಗಿ ವಿನಂತಿ.

– **ಎಂ. ಕೃಷ್ಣ ಪ್ರಸಾದ್**, ಸಂಚಾಲಕರು, ಯುವವಿಭಾಗ

**ಕ್ಯಾಲೆಂಡರ್ 2020 ಲಭ್ಯವಿರುವ ವಿಳಾಸ :**

1. ಆನಂದ ಬಳಗದ ಕಚೇರಿ, ಹೋಟೆಲ್ ಅಜಂತಾ, ಬೆಂಗಳೂರು – 560 001. (080–25594457)
2. ಶ್ರೀ ದಿನೇಶ್ ರಾವ್ .ಎಂ, ಕೃತಿ ಕನ್ಸಲ್ಟೆಂಟ್ಸ್, 204, 2ನೇ ಮೈನ್, 4ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 10. (99456 88955)
3. ಶ್ರೀ ಎಂ.ಕೆ. ಗುರುಮೂರ್ತಿ, ಜಿ.ಎಸ್. ಪವರ್ ಸಿಸ್ಟಮ್ಸ್, 21, 3ನೇ ಕ್ರಾಸ್, 3ನೇ ಹಂತ, ಕಾಮಾಕ್ಯ ಸಿನೇಮಾ ಹತ್ತಿರ, ಕತ್ತರಿಗುಪ್ಪೆ, ಬೆಂಗಳೂರು – 85 (98440 22692)
4. ಎಂ.ಕೆ. ಪ್ರಸಾದ್, ಫ್ರಿಡ್ಜ್ ಹೌಸ್, ಆದಿತ್ಯ ಟವರ್ಸ್, 23, ವಿ.ಎಸ್.ಎನ್. ರಸ್ತೆ, ಶಿವಾಜಿನಗರ, ಬೆಂಗಳೂರು – 560 001 (98450 18183)

**ದಿನಾಂಕ 5.1.2020 ರಂದು ನಡೆಯಲಿರುವ ಆನಂದಮಿಲನ–2020 ದಿನದಂದೂ ಕ್ಯಾಲೆಂಡರ್‌ಗಳನ್ನು ಪಡೆಯಬಹುದು.**

## ಆನಂದ ಮಿಲನ 2020 : ದಿನಾಂಕ 5.01.2020

ಗಮನಿಸಿ! ಭಾಗವಹಿಸಿ!!

ಆನಂದ ಬಳಗದ ಯುವ ವಿಭಾಗ ಪ್ರಸ್ತುತಪಡಿಸುವ

# ಆನಂದ ಮಿಲನ – 2020

**ದಿನಾಂಕ 05.01.2020ರ ಭಾನುವಾರ ಸಂಜೆ 4.00 ರಿಂದ 8.30ರವರೆಗೆ**
ವೈವಿಧ್ಯಮಯವಾಗಿ ನಡೆಯಲಿದೆ

**ಸ್ಥಳ : ಹೋಟೆಲ್ ಅಜಂತಾ**
22 'ಎ', ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560 001

**ವಿನೂತನ ರೀತಿಯಲ್ಲಿ ಸಂಯೋಜಿಸಲ್ಪಡುವ ಮಿಲನದ ಹೈ–ಲೈಟ್ಸ್**

- ಎಳೆ ಮಕ್ಕಳಿಂದ ಹಿರಿ ವಯಸ್ಸಿನವರು ಪಾಲ್ಗೊಳ್ಳಬಹುದಾದ ಮನೋರಂಜನಾ ಆಟಗಳು.
- ಬಗೆ–ಬಗೆಯ ತಿಂಡಿಗಳನ್ನೊಳಗೊಂಡ ಆಹಾರ–ಮೇಳ – ಕರಾವಳಿ ಮತ್ತು ಸ್ಥಳೀಯ ತಿಂಡಿಗಳ ಕೌಂಟರ್‌ಗಳು.
- ರಿಯಾಯಿತಿ ದರದಲ್ಲಿ ಕೂಪನ್‌ಗಳು ಲಭ್ಯ – ಸಂಜೆಯಿಂದ ರಾತ್ರಿಯವರೆಗೆ ನಿಮ್ಮಿಷ್ಟದ ತಿಂಡಿಗಳನ್ನು ಸವಿಯುವ ಅವಕಾಶ.
- ಸಂಗೀತ ನೃತ್ಯ, ನಾಟಕ, ಆಟೋಟ.. ಹೀಗೆ ಹತ್ತು ಹಲವು ಕಾರ್ಯಕ್ರಮಗಳು.
- ಎಲ್ಲರಿಗೂ ಆಕರ್ಷಕ ಬಹುಮಾನ ಗೆಲ್ಲುವ ಅವಕಾಶ.
- ಹಿರಿಯರಿಗೆ, ಮಹಿಳೆಯರಿಗೆ, ದಂಪತಿಗಳಿಗೆ ಹಾಗೂ ಕಿರಿಯರಿಗೆ ಪ್ರತ್ಯೇಕ ಮನೋರಂಜನಾ ಚಟುವಟಿಕೆಗಳು.

ಸದಸ್ಯರಿಂದ – ಸದಸ್ಯರಿಗಾಗಿ – ಸದಸ್ಯರಿಗೋಸ್ಕರ ರೂಪುಗೊಳ್ಳಲಿರುವ ಹೊಸವರ್ಷದ ಸಂಭ್ರಮದ ಸಮ್ಮಿಲನದಲ್ಲಿ ಬಳಗದ ಸದಸ್ಯರು ಅಧಿಕ ಸಂಖ್ಯೆಯಲ್ಲಿ ಆಗಮಿಸಿ ಪಾಲ್ಗೊಳ್ಳಬೇಕಾಗಿ ಕೋರಿಕೆ.

ಆನಂದ ಮಿಲನ 2020 ಹೆಚ್ಚಿನ ವಿವರಗಳನ್ನು ಆನಂದ ಬಳಗದ ವೆಬ್‌ಸೈಟ್ anandabalaga.org ಯಲ್ಲಿ ತಿಳಿಸಲಾಗುವುದು.

**ವಿ.ಸೂ. : ಬಳಗದ ಕ್ಯಾಲೆಂಡರ್ 2020 ವಿತರಿಸಲಾಗುವುದು**

**– ಎಂ. ಕೃಷ್ಣ ಪ್ರಸಾದ್, ಸಂಚಾಲಕರು, ಯುವವಿಭಾಗ**

# ಸದಸ್ಯರಿಗೆ ಒಂದು ದಿನದ ಪ್ರವಾಸ

ಪ್ರತಿ ವರ್ಷದಂತೆ ಸಾಂಸ್ಕೃತಿಕ ವಿಭಾಗವು ದಿನಾಂಕ **25.12.2019ರ ಬುಧವಾರ** ಪ್ರೇಕ್ಷಣೀಯ ಸ್ಥಳಗಳಿಗೆ ಒಂದು ದಿನದ ಪ್ರವಾಸವನ್ನು ಸಂಯೋಜಿಸಲಿದೆ. ಆಸಕ್ತರು ಪ್ರವಾಸದ ಬಗ್ಗೆ ಹೆಚ್ಚಿನ ವಿವರಗಳನ್ನು ದಿನಾಂಕ 01.12.2019 ರ ನಂತರ, ಈ ಕೆಳಗಿನ ಕಾರ್ಯಕರ್ತರನ್ನು ಸಂಪರ್ಕಿಸಿ ಪಡೆಯಲು ಕೋರಲಾಗಿದೆ.

1. **ಹೆಚ್. ರಮೇಶ್ ಭಟ್, ಸಂಚಾಲಕರು,** ಸಾಂಸ್ಕೃತಿಕ ವಿಭಾಗ (98450 24708)
2. **ಶ್ರೀಮತಿ ಗೀತಾ ಪಿ.ಆರ್. ರಾವ್** (99459 38411)
3. **ಶ್ರೀಮತಿ ಸುಧಾ ಎಂ. ರಾವ್** (99011 27738)

# ಆನಂದ ಬಳಗ (ರಿ.) ಯುವ ವಿಭಾಗ

ಆನಂದ ಬಳಗದ ವಾರ್ಷಿಕೋತ್ಸವದ ಅಂಗವಾಗಿ ದಿನಾಂಕ 19-01-2020ನೇ ಭಾನುವಾರ
ಜಯನಗರ 7ನೇ ಬ್ಲಾಕಿನ ನ್ಯಾಷನಲ್ ಕಾಲೇಜ್ ಕ್ರೀಡಾ ಮೈದಾನದಲ್ಲಿ (ಹೆಚ್.ಎನ್. ಕಲಾಕ್ಷೇತ್ರ ಪಕ್ಕದಲ್ಲಿ)



## ಕ್ರೀಡಾ ಮಿಲನ 2020



ಏರ್ಪಡಿಸಲಾಗಿದೆ.

**ಬೆಳಿಗ್ಗೆ 9.00 ರಿಂದ ಸಂಜೆ 5.00ರ ವರೆಗೆ ನಡೆಯಲಿರುವ ಕ್ರೀಡಾ ಮೇಳದಲ್ಲಿ ಬಳಗದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದಲ್ಲದೆ, ತಮ್ಮ ಕುಟುಂಬದವರೊಡನೆ ಬಂದು ಸ್ಪರ್ಧಾಳುಗಳನ್ನು ಪ್ರೋತ್ಸಾಹಿಸುವುದರ ಮೂಲಕ ಕ್ರೀಡಾ ಮಿಲನವನ್ನು ಯಶಸ್ವಿಗೊಳಿಸಬೇಕಾಗಿ ಕೋರಿಕೆ.**

| **ಗೀತಾ ವಾಸುದೇವ ರಾವ್** | **ಎಸ್. ಹರಿದಾಸ್ ಉಪಾಧ್ಯ** | **ಎಂ. ಕೃಷ್ಣ ಪ್ರಸಾದ್** |
|---|---|---|
| ಅಧ್ಯಕ್ಷರು, ಆನಂದ ಬಳಗ | ಕಾರ್ಯದರ್ಶಿ, ಆನಂದ ಬಳಗ | ಸಂಚಾಲಕರು, ಯುವ ವಿಭಾಗ |

## ಕಾರ್ಯಕ್ರಮ

| | | |
|---|---|---|
| ಪೂರ್ವಾಹ್ನ | 8-30 ಗಂಟೆಗೆ | ಸ್ಪರ್ಧಾಳುಗಳ ನೊಂದಣಿ |
| | 9-00 ಗಂಟೆಗೆ | ಉದ್ಘಾಟನೆ |
| | 9-15 ಗಂಟೆಗೆ | ಆಟೋಟ ಸ್ಪರ್ಧೆಗಳು / ಕ್ರಿಕೆಟ್ ( ವಿಶೇಷವಾಗಿ ಮಹಿಳೆಯರು ಹಾಗೂ 50 ವರ್ಷ ಮೇಲ್ಪಟ್ಟ ಪುರುಷರ ಜಂಟಿ ಕ್ರಿಕೆಟ್) |
| | 12.00 ಗಂಟೆಗೆ | ಕ್ರಿಕೆಟ್ ಎಲ್ಲರಿಗೂ (ಪುರುಷರಿಗೆ) |
| ಅಪರಾಹ್ನ | 1.00 ಗಂಟೆಗೆ | ಭೋಜನ (ಸೌಜನ್ಯ : ಶ್ರೀ ಯು.ವಿ. ಕೃಷ್ಣಮೂರ್ತಿ, ಮಾಲೀಕರು, ಹೋಟೆಲ್ ಅನ್ನಪೂರ್ಣ) |
| | 2.00 ಗಂಟೆಗೆ | ಕ್ರಿಕೆಟ್ / ಆಟೋಟ ಸ್ಪರ್ಧೆಗಳು |
| ಸಂಜೆ | 4.00 ಗಂಟೆಗೆ | ಚಹಾ ವಿರಾಮ |
| | 4.30 ಗಂಟೆಗೆ | ಮನೋರಂಜನಾ ಆಟೋಟಗಳು |



## ಕ್ರೀಡಾ ಸ್ಪರ್ಧೆಗಳು

| ಪುರುಷರಿಗೆ | ಮಹಿಳೆಯರಿಗೆ | ಮಕ್ಕಳಿಗೆ |
|---|---|---|
| 1) ಕ್ರಿಕೆಟ್ (12 ವರ್ಷ ಮೇಲ್ಪಟ್ಟವರಿಗೆ) | 1) ತ್ರೋಬಾಲ್ | 1) 100 ಮೀ. ಓಟ (10-16 ವರ್ಷ) |
| 2) ವಾಲಿಬಾಲ್ | 2) 100 ಮೀ. ಓಟ | 2) 50 ಮೀ. ಓಟ (5-10 ವರ್ಷ) |
| 3) 100 ಮೀ. ಓಟ | 3) ತ್ರೋಬಾಲ್ ಎಸೆತ | 3) ವಿಕೆಟ್‌ಗೆ ಚೆಂಡು ಎಸೆತ (5-10 ವರ್ಷ) |
| 4) ಶಾಟ್‌ಪುಟ್ ಎಸೆತ | 4) ನಡಿಗೆಯ ಓಟ (40 ವರ್ಷ ಮೇಲ್ಪಟವರಿಗೆ) | 4) ವಾಲಿಬಾಲ್ ಎಸೆತ (10-16 ವರ್ಷ) |
| 5) ನಡಿಗೆಯ ಓಟ (40 ವರ್ಷ ಮೇಲ್ಪಟ್ಟವರಿಗೆ) | 5) ಕ್ರಿಕೆಟ್ | 5) ಲೆಮನ್ ಅಂಡ್ ಸ್ಪೂನ್ |
| 6) ಲಗೋರಿ | 6) ಲೆಮನ್ ಅಂಡ್ ಸ್ಪೂನ್ | 6) ಪುಸ್ತಕದ ಓಟ |
| 7) ಹಗ್ಗ ಜಗ್ಗಾಟ | 7) ಹಗ್ಗ ಜಗ್ಗಾಟ | |
| | 8) ಸಂಗೀತ ಕುರ್ಚಿ | |

**ವಿ. ಸೂ.:** 1) ಮೇಲೆ ತಿಳಿಸಿದ ಸ್ಪರ್ಧೆಗಳಲ್ಲದೆ ಸಂದರ್ಭಾನುಸಾರವಾಗಿ ಕೆಲವೊಂದು ಹೆಚ್ಚಿನ ಸ್ಪರ್ಧೆಗಳನ್ನು ಏರ್ಪಡಿಸಲಾಗುವುದು.
2) ಕ್ರಿಕೆಟ್ ಆಟ ಆಡಲು ಬಯಸುವ ಮಹಿಳೆಯರು ತಮಗೆ ಅನುಕೂಲಕರವಾದ ಉಡುಗೆಯಲ್ಲಿ ಬರುವುದು ಉತ್ತಮ
3) ಬೆಳಿಗ್ಗೆ 9.15 ಘಂಟೆಗೆ ಕ್ರಿಕೆಟ್ ಪಂದ್ಯ ಆರಂಭವಾಗಲಿದೆ.
4) ಹೆಚ್ಚಿನ ವಿವರಗಳಿಗೆ : ಎಂ.ಕೆ. ಪ್ರಸಾದ್ (98450 18183), ಮಾಧವಿ ಬಲ್ಲಾಳ್ (99860 39107) ಎಂ. ಕೆ. ಗುರುಮೂರ್ತಿ - 9844022692 ಸಂದೀಪ್ - 98450 98150 ರವರನ್ನು ಸಂಪರ್ಕಿಸಿ

# ಸಂಭ್ರಮದ ದೀಪ ದುರ್ಗಾ ನಮಸ್ಕಾರ

ಆನಂದ ಬಳಗದೆ ಸದಸ್ಯರಿಗೆ ಬೆಂಗಳೂರಿನಲ್ಲಿ ತುಸು ಅಪರೂಪವಾಗಿರುವ ದೀಪ ದುರ್ಗಾ ನಮಸ್ಕಾರದ ವೈಭವವನ್ನು ನೋಡುವ ಅವಕಾಶವನ್ನು ಕಲ್ಪಿಸುವ ಉದ್ದೇಶದಿಂದ ಕಳೆದ ಕೆಲವಾರು ವರ್ಷಗಳಿಂದ



ಧಾರ್ಮಿಕ ವಿಭಾಗದವರು ದುರ್ಗಾ ನಮಸ್ಕಾರ ಪೂಜೆಯನ್ನು ಸಂಯೋಜಿಸುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ದುರ್ಗಾ ನಮಸ್ಕಾರವನ್ನು ಆನಂದ ಸಭಾಗೃಹದಲ್ಲಿ ಆಚರಿಸುವ ಸಂಪ್ರದಾಯ ಆರಂಭ ವಾಗಿದ್ದು, ಈ ವರ್ಷ ಕಾರಣಾಂತರಗಳಿಂದ ಅಲ್ಲಿ ಆಚರಿಸಲಾಗದೆ, ಶ್ರೀ ಪೂರ್ಣ ಪ್ರಜ್ಞ ವಿದ್ಯಾಪೀಠದಲ್ಲಿ ಈ ಧಾರ್ಮಿಕ ಕಾರ್ಯಕ್ರಮವನ್ನು ಸಂಯೋಜಿಸಲಾಗಿತ್ತು. ದಿನಾಂಕ 4.8.2019 ರಂದು ಸಂಜೆ ನಡೆದ ದುರ್ಗಾ ನಮಸ್ಕಾರ ಪೂಜೆ ವಿದ್ಯಾಪೀಠದ ಕಾರ್ಯದರ್ಶಿಯವರಾದ ವಿದ್ವಾನ್ ಯು. ಕೇಶವಾಚಾರ್ಯರ ಪ್ರಧಾನ ಪೌರೋಹಿತ್ಯ ದಲ್ಲಿ ವಿಜೃಂಭಣೆಯಿಂದ ನಡೆಯಿತು. ಅಂದು ಸಂಜೆ 4 ರಿಂದಲೇ ವಿದ್ಯಾಪೀಠದ ವಿದ್ಯಾರ್ಥಿಗಳು ಅತ್ಯಂತ ಆಕರ್ಷಕವಾದ ಮಂಡಲನ್ನು ಹಾಗೂ ದುರ್ಗಾದೇವಿಯ ರಂಗೋಲಿಯನ್ನು ರಚಿಸಿ, ತಮ್ಮ ಅಮೋಘವಾದ ಕೈ ಚಳಕವನ್ನು ಪ್ರದರ್ಶಿಸಿದ್ದರು.

ಪೂಜಾ ಕಾರ್ಯಕ್ಕೆ ಕತೃಗಳಾಗಿ ಧಾರ್ಮಿಕ ವಿಭಾಗದ ಸಂಚಾಲಕರಾದ ಶ್ರೀ ವೈ. ಜಯಂತರಾವ್ ಮತ್ತು ಶ್ರೀಮತಿ ಮಾಲಿನಿ ಜೆ. ರಾವ್ ರವರು ದೀಕ್ಷಾಬದ್ಧರಾಗಿದ್ದರು. ಪೂಜಾ ಕಾರ್ಯ, ಸಪ್ತಶತಿ ಪಾರಾಯಣ ಮೊದಲಾದ ವಿಧಿ–ವಿಧಾನಗಳು ನಡೆಯುತ್ತಿದ್ದಂತೆಯೇ ಮಹಿಳಾ ವಿಭಾಗದ ಸದಸ್ಯೆಯರು ಲಕ್ಷ್ಮೀ ಶೋಭಾನವನ್ನು ಭಕ್ತಿ ಶ್ರದ್ಧೆಯಿಂದ ಪಠಿಸಿದರು. ಅದಲ್ಲದೆ ಕೆಲವು ಉತ್ಸಾಹೀ ಸದಸ್ಯರು ತಮ್ಮ ಸಂಗೀತ ಸೇವೆಯನ್ನೂ ಶ್ರೀ ದೇವಿಗೆ ಅರ್ಪಿಸಿದರು.

ಸುಮಾರು 7.30 ಗಂಟೆಯ ಹೊತ್ತಿಗೆ ಮಹಾ ಮಂಗಳಾರತಿ ನೆರವೇರಿದ್ದು, ಆನಂತರ ಸುವಾಸಿನಿ ಪೂಜೆ, ಕನ್ನಿಕಾ ಪೂಜೆಗಳೂ ನಡೆದವು. ಮಂಗಳಾರತಿಯ ನಂತರ ವಿದ್ವಾನ್ ಕೇಶವಾಚಾರ್ಯರವರು ದುರ್ಗಾ ನಮಸ್ಕಾರ ಪೂಜೆಯ ಮಹತ್ವ ಮತ್ತು ಫಲಶ್ರುತಿಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ ಇಂತಹ ಧಾರ್ಮಿಕ ಕಾರ್ಯಕ್ರಮಗಳನ್ನು ಸಂಯೋಜಿಸುತ್ತಿರುವ ಆನಂದ ಬಳಗದ ಸರ್ವರಿಗೂ ದುರ್ಗಾಮಾತೆ ಅನುಗ್ರಹಿಸಲಿ ಎಂದು ಹಾರೈಸಿದರು. ಪೂಜಾ ಕಾರ್ಯದಲ್ಲಿ ಆರ್ಥಿಕ ಕಾಣಿಕೆ ನೀಡಿ ಸಹಕರಿಸಿ ದವರಿಗೆ ವಿಶೇಷ ಪ್ರಸಾದ ವಿತರಣೆ ಹಾಗೂ ಸಾರ್ವಜನಿಕ ತೀರ್ಥ–ಪ್ರಸಾದದ ನಂತರ ಎಲ್ಲರಿಗೂ ವಿಶೇಷವಾದ ಫಲಾಹಾರದ ವ್ಯವಸ್ಥೆಯನ್ನು ಮಾಡಲಾಗಿತ್ತು. ವರ್ಷದಿಂದ ವರ್ಷಕ್ಕೆ ಜನಪ್ರಿಯವಾಗುತ್ತಿರುವ ದೀಪ ದುರ್ಗಾ ನಮಸ್ಕಾರ ಕಾರ್ಯಕ್ರಮದಲ್ಲಿ ಈ ವರ್ಷ ಸುಮಾರು



500 ಸದಸ್ಯರು ಪಾಲ್ಗೊಂಡಿದ್ದು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಮತ್ತು ಅರ್ಥಪೂರ್ಣವಾಗಿ ನಡೆಸುವಲ್ಲಿ ಶ್ರಮಪಟ್ಟ ಧಾರ್ಮಿಕ ವಿಭಾಗದ ಸಂಚಾಲಕರಾದ ಶ್ರೀ ವೈ. ಜಯಂತರಾವ್ ಮತ್ತು ಅವರ ಕ್ರಿಯಾಶೀಲ ತಂಡಕ್ಕೆ ಅಭಿನಂದನೆಗಳು. ವಿದ್ಯಾಪೀಠದ ಕಾರ್ಯದರ್ಶಿ ವಿದ್ವಾನ್ ಕೇಶವಾಚಾರ್ಯ ಮತ್ತು ಅವರ ಕಾರ್ಯ ತಂಡದ ಸಂಪೂರ್ಣ ಬೆಂಬಲ ಮತ್ತು ಸಹಕಾರಕ್ಕೆ ಕೃತಜ್ಞತೆ ಸಲ್ಲಲೇಬೇಕು.

# ಸಡಗರದ ಗಣೇಶೋತ್ಸವ

ದಿನಾಂಕ 8.9.2019ನೇ ಭಾನುವಾರ ಬೆಳಗ್ಗೆ 9.30 ರಿಂದ ಸಂಜೆ 3 ಗಂಟೆವರೆಗೆ ಬೆಂಗಳೂರು ಬಸವನಗುಡಿ ರಸ್ತೆಯಲ್ಲಿರುವ ಗೋವರ್ಧನ ಗಿರಿ ಕ್ಷೇತ್ರದಲ್ಲಿ ನಿರ್ಮಿತವಾಗಿರುವ ಪುತ್ತಿಗೆ ಮಠದವರ ಭವ್ಯ ಭವನದ ನಾಲ್ಕನೇ ಮಹಡಿಯ ಸಭಾಂಗಣದಲ್ಲಿ ನಮ್ಮ ಆನಂದಬಳಗದ ಉತ್ಸಾಹಿ ಯುವಕೂಟದವರಿಂದ ಅದ್ದೂರಿಯಾಗಿ ಏರ್ಪಡಿಸಿ ನಡೆಸಿಕೊಟ್ಟ ಗಣೇಶೋತ್ಸವದ ಸಂಕ್ಷಿಪ್ತ ವರದಿ

ದಿನಾಂಕ 5.9.2019 ರಂದು ಮಿಂಚು ಅಂಚೆ ಮೂಲಕ (ಈ–ಮೇಲ್) ದಿನೇಶ್ ರಾವ್ .ಎಂ ಅವರು ಕಳಿಸಿದ ಆನಂದ ಬಳಗದ ವಾರ್ಷಿಕ ಗಣೇಶೋತ್ಸವದ ಪ್ರೀತಿ ಮತ್ತು ಆದರಪೂರ್ವಕ ಆಹ್ವಾನದ ಕರೆಯೋಲೆ ನನ್ನ ಮನಸ್ಸಿನಲ್ಲಿ ಈ ಭಾವನಾತ್ಮಕ ರೂಪವಾಗಿ ಕಂಡಿತು.

"ಬಾರಾ, ನೋಡು ಬಾರಾ, ಓಡಿ ಬಾರಾ,
ಬಳಗದ ಗಣಪನ ಪೂಜೆ ಮಾಡುವ ಬಾರಾ"

'ಆನಂದ ಬಳಗದ ಸಂಭ್ರಮದ ಕಣ್ಣಾರ ಕಾಣು ಬಾರಾ'
'ಗುರು ಹಿರಿಯರ ಗಾಂಭೀರ್ಯ ಉಪಸ್ಥಿತಿಯ ನೋಡು ಬಾರಾ'
ಹೆಂಗಳೆಯರ ಸಂಭ್ರಮದ ಬಿಂಕದಾಟವ ನೋಡು ಬಾರಾ'
'ಮಂದಸ್ಮಿತ ಮಕ್ಕಳ ತುಂಟಾಟದ ಪುಂಡಾಟ ನೋಡು ಬಾರಾ'
'ಅಲಂಕಾರದಿಂದ ಶೋಭಿಸುವ ಗಣಪ ಮಂಟಪವ ವೀಕ್ಷಿಸಲು ಬಾರಾ'
'ಮಂಟಪವ ಅಲಂಕರಿಸುವ ಯುವಕರ ಸ್ಫೂರ್ತಿ, ಕೈಚಳಕವ ನೋಡು ಬಾರಾ'
'ಘನ ಗಾಂಭೀರ್ಯದಲಿ ಕುಳಿತ ಗಣಪ ಮೂರ್ತಿಯ ಕಾಣಲು ಬಾರಾ'
'ಆಕರ್ಷಕ ರಂಗೋಲಿ ಕಲೆಯ ರಂಗಿನಾಟವ ನೋಡಲು ಬಾರಾ'
'ಸುಹಾಸಿನಿಯರ ಭಕ್ತಿ ಸಂಗೀತ ಸುಧೆಯ ಸವಿಯಲು ಬಾರಾ'
'ಚಂಡೆಯಾಟದಲಿ ಚಂದಾಗಿ ಪುಟಿಯುವ ಬಾರಾ'
'ಪೂಜ್ಯ ಸ್ವಾಮೀಜಿಯವರ ಆಶೀರ್ವಾದ ಪಡೆಯಲು ಬಾರಾ'
'ಗಣಪ ಪೂಜೆಯಲಿ ಪಾಲ್ಗೊಂಡು ಪುನೀತರಾಗೋಣು ಬಾರಾ'
'ಸಹಭೋಜನ ಕೂಟದಲಿ ಸಂತಸದಿ ಕೂತು ಸವಿಪಾಕವ ಸ್ವಾದಿಸುವ ಬಾರಾ'
'ಸಂತೋಷದಿ ಬೆರೆತು ನಲಿದು ಸವಿ ನೆನಪಿನಲಿ ಮತ್ತೆ ಮುಂದೆ ಕೂಡುವ
ಭರವಸೆಯೊಂದಿಗೆ ಅಗಲುವ ದೃಶ್ಯವ ನೋಡಿ ಆನಂದಿಸಲು ಬಾರಾ'
'ಬಾರಾ ಬಾರಾ ಆನಂದ ಬಳಗದ ಬಂಧುಗಳ ಮಿಲನಾನಂದವ ಅನುಭವಿಸಲು ಬಾರಾ'
ಎಂದು ಪ್ರೀತಿ ವಿಶ್ವಾಸದಿಂದ ಕೈ ಬೀಸಿ ಕರೆದ ಅನುಭವವಾಯಿತು

ಕರೆ ಮನ್ನಿಸಿ ಸಮಾರಂಭಕ್ಕೆ ತೆರಳಿದಾಗ ಅಲ್ಲಿ ನಾ ಕಂಡ ದೃಶ್ಯ : ಸಮಯಕ್ಕೆ ಸರಿಯಾಗಿ ಬಂದ ಬಂಧುಗಳಿಗೆ ಬೆಳಗಿನ ಉಪಾಹಾರದ ಉಪಚಾರದ ನಂತರ ಅಂದಿನ ಪೂಜಾಕಾರ್ಯಕ್ರಮಗಳ ಪೌರೋಹಿತ್ಯ ವಹಿಸಿದ್ದ ಶ್ರೀ ವಿಷ್ಣುಮೂರ್ತಿ ಸರಳಾಯರ ನೇತೃತ್ವದಲಿ ಬಳಗದ ಯುವ ವಿಭಾಗದ ಸಂಚಾಲಕರಾದ ಶ್ರೀ ಎಂ. ಕೃಷ್ಣ ಪ್ರಸಾದ್ ಮತ್ತು ಅವರ ಪತ್ನಿ ಶ್ರೀಮತಿ ನಿವೇದಿತ ಪ್ರಸಾದ್ ರವರು ಅಂದು ನಡೆಯುವ ಹೋಮ, ಹವನ ಮತ್ತು ಪೂಜೆಯ ದೀಕ್ಷಾಬದ್ಧರಾಗಲು ಮತ್ತು ಮುಂಬರುವ ಎಲ್ಲಾ ಕಾರ್ಯಕ್ರಮಗಳು ಸುಗಮವಾಗಿ, ನಿರ್ವಿಘ್ನವಾಗಿ ನಡೆಯಲಿ ಎಂದು ಪ್ರಾರ್ಥಿಸಲು ಗವಿ ಗೋವರ್ಧನನ ಸನ್ನಿಧಾನಕ್ಕೆ ತೆರಳಿ ಪೂಜೆ ಮತ್ತು ಪ್ರಾರ್ಥನೆ ಸಲ್ಲಿಸಿ ಸುಮಾರು 9.30ಕ್ಕೆ ಸಭಾಂಗಣಕ್ಕೆ ಮರಳಿ ಪ್ರವೇಶಿಸಿ ಆರಂಭಗೊಂಡ ಕಾರ್ಯಕ್ರಮ ಸಾಯಂಕಾಲ 3.30ರವರೆಗೆ ಸತತವಾಗಿ, ವ್ಯವಸ್ಥಿತವಾಗಿ, ಸಾಂಗವಾಗಿ ನೆರವೇರಿತು.



ಈ ಸಲದ ನಮ್ಮ ಬಳಗದ ವಾರ್ಷಿಕ ಗಣೇಶೋತ್ಸವದ ವಿಶಿಷ್ಟತೆ ಏನೆಂದರೆ : ನಮ್ಮ ಬಳಗದ ಬನ್ನೇರುಘಟ್ಟ ಸಭಾಂಗಣದಲ್ಲಿ ನಡೆಯದೆ, ಬೆಂಗಳೂರಿನ ಪುತ್ತಿಗೆ ಮಠದ ಸಭಾಂಗಣದಲಿ, ಪೂಜ್ಯ ಸ್ವಾಮೀಜಿಯವರ ಉಪಸ್ಥಿತಿ, ಆಶೀರ್ವಚನದೊಂದಿಗೆ ನಡೆದುದರಿಂದ ಬಹು ಸಂಖ್ಯೆಯಲಿ ಆನಂದ ಬಳಗದ ಸದಸ್ಯರು ತಮ್ಮ ಕುಟುಂಬದೊಂದಿಗೆ ಪಾಲುಗೊಂಡು ಕಾರ್ಯಕ್ರಮವನ್ನು ಚೆಂದ ಕಾಣಿಸಿಕೊಟ್ಟಿರುವುದು.

ಪ್ರಾರ್ಥನೆ ನಂತರ ಭವ್ಯ ಸಭಾಂಗಣದ ಎಡಭಾಗದಲ್ಲಿ ನಿರ್ಮಿಸಿದ್ದ ಹೋಮಕುಂಡದಲ್ಲಿ ಆಚಾರ್ಯ ಮುಖೇನ ಪ್ರಸಾದ್ ದಂಪತಿಗಳ ಸಂಕಲ್ಪದೊಂದಿಗೆ ಶಾಸ್ತ್ರೋಕ್ತವಾಗಿ ಹೋಮ, ಹವನವನ್ನು ವಿಧಿವತ್ತಾಗಿ ನೆರವೇರಿಸಲಾಯಿತು.

ಈ ನಡುವೆ ಸಭಾಂಗಣದ ಅಂಗಳದ ನೆಲಹಾಸಿನ ಮೇಲೆ ವಿವಿಧ ಕೂಟಗಳಿಂದ ಮನೋಹರ, ಆಕರ್ಷಕ ವಿವಿಧ ವಿನ್ಯಾಸದ ರಂಗೋಲಿ ಚಿತ್ತಾರದ ಕೈಚಳಕ ಪ್ರದರ್ಶನವಾದರೆ, ಇನ್ನೊಂದೆಡೆ ಯುವ ಬಳಗದವರಿಂದ ಅದ್ದೂರಿ ಹೂವಿನ ಮಂಟಪಾಲಂಕಾರ ಮಾಡಲಾಯಿತು. ಹೋಮದ ಪೂರ್ಣಾಹುತಿ, ತೀರ್ಥ ಪ್ರಸಾದ ವಿತರಣೆಯ ನಂತರ ಪ್ರತಿಷ್ಠಾಪಿತ ಗಣಪನ ಪೂಜೆ ನಡೆಯುತ್ತಿರುವಾಗ, ಸಭಾಂಗಣದ ಬಲಭಾಗದಲ್ಲಿ ಬಳಗದ ಭಗಿನಿಯರಿಂದ ಸುಶ್ರಾವ್ಯ ಭಕ್ತಿ ಸಂಗೀತ ಕಾರ್ಯಕ್ರಮ, ನಂತರ ಸಾಮೂಹಿಕ ವಿಷ್ಣು ಸಹಸ್ರನಾಮ ಪಠಿಸಲಾಯಿತು.



ಗಣಪ ಪೂಜೆಯ ಉತ್ತರಾರ್ಧದಲ್ಲಿ ಪುತ್ತಿಗೆ ಮಠಾಧೀಶರಾದ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮಿಗಳು ಸಭಾ ಮಂಟಪಕ್ಕೆ ಆಗಮಿಸಿ ಮಹಾ ಮಂಗಳಾರತಿಯಲ್ಲಿ ಪಾಲ್ಗೊಂಡು, ನಂತರ ನೆರೆದ ಬಳಗದ ಬಂಧು ಗಳನ್ನುದ್ದೇಶಿಸಿ ಆಶೀರ್ವಚನ ನೀಡಿದರು. ಬಳಗದ ಸ್ಫೂರ್ತಿದಾಯಕ ಅಧ್ಯಕ್ಷೆಯಾದ ಶ್ರೀಮತಿ ಗೀತಾ ವಾಸುದೇವರಾವ್ ಅವರಿಂದ ಫಲ ಪುಷ್ಪಗಳ ಗೌರವಾರ್ಪಣೆ ಸ್ವೀಕರಿಸಿ, ಆನಂದ ಬಳಗದ ಸರ್ವ ಸದಸ್ಯರ ಪರವಾಗಿ ಕೃಷ್ಣ ಪ್ರಸಾದ್ ದಂಪತಿಗಳು ಹಾಗೂ ಕೆಲವು ಸದಸ್ಯ ದಂಪತಿಗಳಿಂದ ಪಾದಪೂಜೆ ಸ್ವೀಕರಿಸಿದ ನಂತರ ಸ್ವಾಮೀಜಿಯವರು ತೀರ್ಥ ಪ್ರಸಾದವನ್ನು ನೆರೆದ ಬಳಗದ ಭಕ್ತಾದಿಗಳಿಗೆ ವಿತರಿಸಿ, ಮುಂದೆ ಬಳಗದವರಿಂದ ಆಯೋಜಿಸುವ ಈ ತರಹದ ಧರ್ಮಕಾರ್ಯಗಳಿಗೆ ತಮ್ಮ ಸಹಕಾರ ಮತ್ತು ಸಭಾಭವನದ ಮೀಸಲಾತಿಯ ಭರವಸೆ ನೀಡಿದರು.

ತದನಂತರ ಯುವಕರ ಸಹೃದಯ ಸವಿಮಾತಿನ ಉಪಚಾರದೊಂದಿಗೆ ಸವಿಯಾದ ರಸವತ್ತಾದ ಸಹಭೋಜನ ಸ್ವೀಕರಿಸಿ ಭಾಗವಹಿಸಿದ ಎಲ್ಲಾ ಬಂಧುಗಳು ಸಂತುಷ್ಟರಾದರು.

3 ಗಂಟೆಗೆ ಗಣೇಶ ಮೂರ್ತಿಯ ವಿಸರ್ಜನೆಯ ಭರಾಟೆ. ಮೆರವಣಿಗೆಯ ಸಮಯದಲ್ಲಿ ಅಬಾಲ ವೃದ್ಧರೆಂಬ ಭೇದವಿಲ್ಲದೆ ಎಲ್ಲರೂ ಕಲೆತು ಹುರುಪಿನ ಚೆಂಡೆಯ ನಾದಕ್ಕೆ ಕುಣಿದು ಕುಪ್ಪಳಿಸಿ ಗಣಪನನ್ನು ಬೀಳ್ಕೊಟ್ಟ ಪರಿ ಸ್ಮರಣೀಯ. ಇದರೊಂದಿಗೆ ಈ ವರ್ಷದ ಚಿಕ್ಕ ಚೊಕ್ಕ ಸುಸಜ್ಜಿತವಾದ ಗಣೇಶೋತ್ಸವಕ್ಕೆ ಮಂಗಳ ಹಾಡಲಾಯಿತು.

ಭಾಗವಹಿಸಿದ ಎಲ್ಲಾ ಬಂಧುಗಳಿಗೂ ಆನಂದ ಬಳಗದ ಯುವ ವಿಭಾಗದ ಸಂಚಾಲಕರ ಪರವಾಗಿ ಧನ್ಯವಾದಗಳು.

**– ಡಾ. ಶಂಕರನಾರಾಯಣ ರಾವ್**

# ಸಂಕಲ್ಪ ಸಿದ್ಧಿ – ವಿಚಾರ ಸಂಕಿರಣ



ಯುವ ವಿಭಾಗದ ಸದಸ್ಯರಿಗೆ ದಿನಾಂಕ 18.8.2019 ರಂದು ಕರ್ನಾಟಕ ಟೆನ್ನಿಸ್ ಕ್ಲಬ್ ಸಂಘದ ಆವರಣದಲ್ಲಿ ಯುವ ವಿಭಾಗದ ಸಂಚಾಲಕರಾದ ಉತ್ಸಾಹಿ ಯುವಕ ಶ್ರೀ ಎಂ. ಕೃಷ್ಣಪ್ರಸಾದರವರ ನೇತೃತ್ವದಲ್ಲಿ ಗೋಲ್ ಸೆಟ್ಟಿಂಗ್ ವರ್ಕ್‌ಶಾಪ್ ಕಾರ್ಯಕ್ರಮವು ಬೆಳಗ್ಗೆ 10 ರಿಂದ ಸಂಜೆ 4.30 ವರೆಗೆ 60 ಜನ ಸದಸ್ಯರ ಉಪಸ್ಥಿತಿಯಲ್ಲಿ ನಡೆಯಿತು.

ಕಾರ್ಯಕ್ರಮದ ನಿರೂಪಣೆಯನ್ನು ಸಂಚಾಲಕರಾದ ಸಾರ್ವಜನಿಕ ಸಂಪರ್ಕ ವಿಭಾಗದ ಕೆ.ಎನ್. ಅಡಿಗರವರು ಮಾಡಿದರು. ಇಂಥ ಸಭೆಗೆ ಹೆಚ್ಚಿನ ಸದಸ್ಯರು ಬಂದು ಒಬ್ಬರಿಗೊಬ್ಬರು ಪರಿಚಯಿಸಿಕೊಂಡು ಇನ್ನಷ್ಟು ಯುವ ಸದಸ್ಯರು ಹೆಚ್ಚಲಿ ಎಂಬ ಒಳ್ಳೆ ಸಲಹೆಯನ್ನು ಕೊಟ್ಟರು. ಎಂ. ಕೃಷ್ಣಪ್ರಸಾದರವರು ಮಾಜಿ ಅಧ್ಯಕ್ಷರಾದ ಶ್ರೀ ಅನಂತ ಪದ್ಮನಾಭ ಬಲ್ಲಾಳ್ ಹಾಗೂ ಅಂದಿನ ಮುಖ್ಯ ಅತಿಥಿಯವರಾದ ಶ್ರೀ ಹರಿದಾಸ ಉಪಾಧ್ಯಾಯರನ್ನು ಗೌರವದಿಂದ ವೇದಿಕೆಗೆ ಆಹ್ವಾನಿಸಿದರು. ಎಲ್ಲರ ಸಮ್ಮುಖದಲ್ಲಿ "ಹಚ್ಚುವೆವು ಕನ್ನಡದ ದೀಪ" ಎಂದು ಜ್ಯೋತಿ ಬೆಳಗಲಾಯಿತು. ಕೃಷ್ಣಪ್ರಸಾದರವರು ಅಂದಿನ ಮುಖ್ಯ ವಿಷಯವನ್ನು ಪ್ರಸ್ತಾಪಿಸಿದರು. ಯಾವುದೇ ಕೆಲಸ ಸುರು ಮಾಡುವಾಗ ಚಿಕ್ಕ ಹಂತದಿಂದ ಶುರು ಮಾಡಿ ಅಡೆತಡೆಗಳನ್ನು ಎದುರಿಸಿ ಮುನ್ನುಗ್ಗಿ ಗುರಿ ಮುಟ್ಟಬೇಕು ಎಂದರು. ಶ್ರೀ ಎಮ್. ಸತ್ಯನಾರಾಯಣ ಭಟ್‌ರವರು ಆ ದಿನದ ಮುಖ್ಯ ಅತಿಥಿ ಬಳಗದ ಕಾರ್ಯದರ್ಶಿ ಶ್ರೀ ಎಸ್. ಹರಿದಾಸ ಉಪಾಧ್ಯ ಅವರ ಕಿರುಪರಿಚಯವನ್ನು ಮಾಡಿದರು. ಶ್ರೀ ಉಪಾಧ್ಯರವರು ಅನೇಕ ಸಂಸ್ಥೆಗಳಲ್ಲಿ ಹಾಗೂ ಕೈಗಾರಿಕೆಗಳಲ್ಲಿ ದುಡಿದು ಸಾಧನೆ ಮಾಡಿದವರು. ಸಜ್ಜನತೆಯ, ಸರಳತೆಯ, ಗೌರವಾನ್ವಿತ ವ್ಯಕ್ತಿ ಎಂದು ಪ್ರಶಂಸಿದರು. ಅತಿಥಿಗಳಾದ ಶ್ರೀ ಹರಿದಾಸ ಉಪಾಧ್ಯಾಯರು ಸಂಹಿತ್‌ನಂಥ ವ್ಯಕ್ತಿ ವಿರಳ. ಒಂದು ಗುರಿ ಮುಟ್ಟಬೇಕಾದರೆ ಅನೇಕ ಕಷ್ಟಗಳನ್ನು ಎದುರಿಸಬೇಕಾಗುತ್ತದೆ ಹಾಗೆ ವಿವೇಕಾನಂದರ ವಾಣಿಯಾದ "ಎದ್ದೇಳಿ, ನಿಮ್ಮಲ್ಲಿರುವ ದೈವತ್ವವನ್ನು ಎಚ್ಚರಿಸಿ" ಎಂಬ ಹಿತನುಡಿಯನ್ನು ಹೇಳಿದರು. ಶ್ರೀ ಪ್ರಕಾಶ್‌ರವರು ಸಂಹಿತ್‌ರನ್ನು ವೇದಿಕೆಗೆ ಆದರದಿಂದ ಸ್ವಾಗತಿಸಿದರು. ಇವರಿಗೆ "ಸೇವಾ ರತ್ನ" ಎಂಬ ಬಿರುದು ಬಂದಿರುವುದನ್ನು ತಿಳಿಸಿದರು.

ಶ್ರೀ ಸಂಹಿತ್ ಕುಂಜಿತ್ತಾಯರು ವೇದಿಕೆಯಲ್ಲಿ ಗುರುವಿನ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವನ್ನು ಮುಂದು ವರಿಸಿದರು. ಅವರು ಇಷ್ಟು ಮುಂದೆ ಬರಲು ಅವರ ತಂದೆಯವರಾದ ಶ್ರೀ ಗೋಪಾಲಕೃಷ್ಣ ಕುಂಜಿತ್ತಾಯ ಹಾಗೂ ದೇಶ ವಿದೇಶಗಳಲ್ಲಿ ವಿಖ್ಯಾತಿಗೊಂಡಿರುವ ತಾಯಿಯವರಾದ ಶ್ರೀಮತಿ ಪ್ರವೀಣ ಕುಂಜತ್ತಾಯರ ಪ್ರೋತ್ಸಾಹವೇ ಕಾರಣ ಎಂದು ಅವರನ್ನು ಪರಿಚಯಿಸಿದರು.

ಕಾರ್ಯಕ್ರಮವನ್ನು ಸಂಕಲ್ಪದಿಂದ ಶುರು ಮಾಡಿದರು. 'ಸನ್' 'ಕಲ್ಪ' ಎಂಬ ಎರಡು ಪದಗಳು ತುಂಬಾ ಮುಖ್ಯವಾಗಿದೆ. ಯಾವ ಸಾಧನೆ ಮಾಡಬೇಕಾದರೂ ನಿರ್ಧಾರ ಹಾಗೂ ಗುರಿ ಇರಬೇಕು. ನೆನಪಿನ ಶಕ್ತಿ ಹಾಗೂ ಗುರಿ ಮುಟ್ಟುವ ರೀತಿಯನ್ನು ವಿವರಿಸಿದರು. ಧ್ಯಾನ ಹಾಗೂ ಅನೇಕ ರೀತಿಯ ಆಸನಗಳನ್ನು ಮಾಡಿ ತೋರಿಸಿ, ಸದಸ್ಯರಿಂದ ಮಾಡಿಸಿದರು. "ಅಲ್ಪಾವಧಿ", "ಮಧ್ಯಾವಧಿ", "ದೀರ್ಘಾವಧಿ" ಗುರಿ ನಿಗದಿಪಡಿಸುವ ಬಗ್ಗೆ ವಿವರವಾಗಿ ವಿವರಿಸಿದರು. 1.30 ಯಿಂದ 2 ವರೆಗೆ ವಿರಾಮದ ವೇಳೆಯಲ್ಲಿ ಅತೀ ರುಚಿಯಾದ ಭರ್ಜರಿ ಭೋಜನನಿಂದ ಎಲ್ಲರೂ ಸಂತೃಪ್ತಿಗೊಂಡರು.

ನಂತರ ಸಂಹಿತ್‌ರವರು ಮನೋರಂಜನೆಯ ಆಟವನ್ನು ನೀಡಿ ರಂಜಿಸಿದರು. ಆ ಮೇಲೆ ನಾಡಿ ಶುದ್ಧತೆಯ ಆಸನವನ್ನು ಎಲ್ಲ ಸದಸ್ಯರಿಂದ ಮಾಡಿಸಿದರು. ಸದಸ್ಯರೆಲ್ಲರ ಪ್ರತಿಕ್ರಿಯೆ ತುಂಬಾ ಸಕಾರಾತ್ಮಕವಾಗಿತ್ತು. ಹೀಗೆ ತನ್ನದೇ ಆದ ಪರಿಕಲ್ಪನೆಗಳ ಮಿಶ್ರಣದಿಂದ ಸಂಹಿತ್‌ರವರು ಗುರಿ ಹೊಂದಿಸುವಿಕೆಯ ಬಗ್ಗೆ ಅನೇಕ ಆಸನಗಳನ್ನು, ಅದರಿಂದ ಆಗುವ ಉಪಯೋಗಗಳನ್ನು ವಿವರವಾಗಿ ತಿಳಿಸಿದರು.

ಶ್ರೀ ಸತ್ಯನಾರಾಯಣ ಭಟ್‌ರವರು ಇಡೀ ದಿನದ ಕಾರ್ಯಕ್ರಮವನ್ನು ಸಂಕ್ಷಿಪ್ತ ಅವಧಿಯಲ್ಲಿ ಅಮೋಘವಾಗಿ ವರ್ಣಿಸಿದರು. ಅತಿಥಿಗಳನ್ನು ಸನ್ಮಾನಿಸಿದರು. ಗೋಪಾಲಕೃಷ್ಣ ಕುಂಜತ್ತಾಯರು ಎಲ್ಲ ಅತಿಥಿಗಳಿಗೂ ಎಲ್ಲ ಸದಸ್ಯರಿಗೂ ಧನ್ಯವಾದಗಳನ್ನು ಹೇಳಿ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿದರು.

**– ಕುಸುಮಾ ಶ್ರೀನಿವಾಸ್**

*With Best Compliments from :*

# ಹೋಟೆಲ್ ಶೀತಲ್

ಆನಂದರಾವ್ ವೃತ್ತ, ಬೆಂಗಳೂರು – 560 009

## HOTEL
## Sheethal

**#32/12, Sheshadri Road,**
**Ananda Rao Circle,**
**Bangalore - 560 009**
**Ph : 41139560 - 64**
**Mobile : 98457 77381**



## Sheethal
## Residency

**# 3/1, Old Sawar Lane, Sheshadri Road**
**Near Sangolli Rayanna Circle,**
**Bangalore - 560 009**
**Ph : 080 2234 3777 / 80 / 81**
**email : info@sheetalresidency.com**
**URL : www.sheetalresidency.com**

**ಎ. ಪ್ರಭಾಕರ ರಾವ್** ಮ್ಯಾನೇಜಿಂಗ್ ಪಾರ್ಟ್‌ನರ್

ಶುಭಾಶಯಗಳನ್ನು ಕೋರುವವರು



|| ಹರಿಃ ಓಂ ||

# ಉಪಾಧ್ಯ ಮತ್ತು ಕಂಪನಿ



(ಆಯುರ್ವೇದ ಔಷಧಗಳ ಸಗಟು ಮಾರಾಟಗಾರರು)

**ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು – 27, ದೂರವಾಣಿ : 22235533, 22241121**

**ಉಪಾಧ್ಯ ಆಯುರ್ವೇದ ಭಂಡಾರ**

ಮತ್ತಿಕೆರೆ : 15/33, ಮೊದಲನೆಯ ಮುಖ್ಯರಸ್ತೆ
ಬೆಂಗಳೂರು – 560 054
ದೂರವಾಣಿ : 23372422

ಜಯನಗರ : 1333, 26ನೇ ಮುಖ್ಯರಸ್ತೆ,
4ನೇ 'ಟಿ' ಬ್ಲಾಕ್, ಬೆಂಗಳೂರು – 41
ದೂರವಾಣಿ : 26639321

ಶ್ರೀರಾಂಪುರ: 389, ಮಹಾಕವಿ ಕುವೆಂಪು ರಸ್ತೆ,
ನಾಗಪ್ಪ ಬ್ಲಾಕ್, ಬೆಂಗಳೂರು – 21

**ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ತಜ್ಞ ವೈದ್ಯರುಗಳಿಂದ ಚಿಕಿತ್ಸಾ ಸೌಲಭ್ಯ ದೊರೆಯುತ್ತದೆ.**
**ಸಮಯ ಬೆಳಿಗ್ಗೆ 11.00 ರಿಂದ 3.00 ಮತ್ತು ಸಂಜೆ 7.00 ರಿಂದ 8.30 ರವರೆಗೆ**
**(ಆನಂದ ಬಳಗದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಸೇವೆ ಲಭ್ಯ)**

# ವೈವಿಧ್ಯಮಯ ಪ್ರತಿಭಾಮೇಳ

ಏನಾದರೂ ಹೊಸತನ, ಒಂದಿಷ್ಟು ನೀತಿ, ಸಂದೇಶಗಳನ್ನು ತುಂಬಿಸಿ ಈ ಬಾರಿಯೂ ಮಕ್ಕಳ ಪ್ರತಿಭಾ ಮೇಳವನ್ನು ಪರಿಣಾಮಕಾರಿಯಾಗಿ ಪ್ರಯೋಗಿಸಬೇಕೆಂಬ ಬಯಕೆ ಹೊತ್ತು ಕೆಲವು ಪ್ರಯತ್ನಗಳನ್ನು ಮಾಡೇಬಿಟ್ಟೆವು. ನಮ್ಮ ಬಳಗದ ಮಕ್ಕಳ ಕಾರ್ಯಕ್ರಮದ ಬರೀ ಪ್ರತಿಭಾ ಪ್ರದರ್ಶನವಾಗಿರದೇ ಅದರ ಮೂಲಕ ಕಿಂಚಿತ್ತಾದರೂ ಒಳ್ಳೆಯ ಪರಿಣಾಮ ಬೀರಬೇಕೆಂಬ ಉದ್ದೇಶವಿಟ್ಟುಕೊಂಡು ಪ್ರಸ್ತುತ ವಿದ್ಯಮಾನ ಹಾಗೂ ಜನಗಳ ಮನೋಧರ್ಮಕ್ಕೆ ಸರಿಹೊಂದುವಂತಹ "ಜೈ ಜವಾನ್ ಜೈ ಕಿಸಾನ್" ಎಂಬ ವಸ್ತು ವಿಷಯವನ್ನಾದರಿಸಿದ ಕಾರ್ಯಕ್ರಮವನ್ನು ಈ ಬಾರಿ ಪ್ರದರ್ಶಿಸಿದೆವು. ಆ ಮೂಲಕ ಇಂದಿನ ಹಾಗೂ ಮುಂದಿನ ಪೀಳಿಗೆಯವರ ಮನದಲ್ಲಿ ನಮ್ಮ ದೇಶದ ಪ್ರಮುಖ ಜೀವನಾಡಿಗಳಾದ ರೈತ ಹಾಗೂ ಯೋಧ ಸಮುದಾಯದ ಮೇಲೆ ಆದರ, ಅಭಿಮಾನ ಮತ್ತು ಗೌರವಗಳನ್ನು ಹೆಚ್ಚಿಸುವ ಪ್ರಯತ್ನ ನಮ್ಮ ಗುರಿಯಾಗಿತ್ತು. ಸುಮಾರು ಎರಡು ತಾಸುಗಳ ಕಾಲ, ಹಾಡು, ನೃತ್ಯ, ರೂಪಕ ಹಾಗೂ ಹಿಮ್ಮೇಳದ ದೃಶ್ಯ ವೈಭವಗಳ ಮೂಲಕ ರೈತರು ಹಾಗೂ ಯೋಧರ ಜೀವನದಲ್ಲಿ ಸಾಮಾನ್ಯವಾಗಿ ನಡೆಯುವ ವಿವಿಧ ಸನ್ನಿವೇಶಗಳು ಮತ್ತು ಭಾವಾವೇಶಗಳನ್ನು ಬಳಗದ ಮಕ್ಕಳುಗಳು ಗುರು ಪೃಥ್ವಿ ಹಾಗೂ ಗುರು ಅಲಂಕೃತ ಬಾಲಕೃಷ್ಣ ಅವರುಗಳ ಸಂಯೋಜನೆ ಹಾಗೂ ನಿರ್ದೇಶನದಲ್ಲಿ ಅದ್ಭುತವಾಗಿ ಪ್ರದರ್ಶಿಸಿದರು.

ದಿನಾಂಕ 25.8.2019ರ ಭಾನುವಾರ ಜೆ.ಸಿ. ರಸ್ತೆಯ ಎ.ಡಿ.ಎ. ರಂಗಮಂದಿರದಲ್ಲಿ ನಡೆದ ಪ್ರತಿಭಾ ಮೇಳವು ಮಕ್ಕಳು ಹಾಡಿದ ಸುಶ್ರಾವ್ಯ ಪ್ರಾರ್ಥನಾ ಗೀತೆಯೊಂದಿಗೆ ಆರಂಭವಾಯಿತು. ಸಭಾ ಕಾರ್ಯಕ್ರಮದ ಅಧ್ಯಕ್ಷತೆ ಶ್ರೀಮತಿ ಗೀತಾ ವಾಸುದೇವರಾವ್ ವಹಿಸಿದ್ದು, ಮುಖ್ಯ ಅತಿಥಿಗಳಾಗಿ ಹೆಸರಾಂತ ಪತ್ರಿಕೋದ್ಯಮಿ ಹಾಗೂ ಲೇಖಕರಾದ ಶ್ರೀ ಗಿರೀಶ್‌ರಾವ್ (ಜೋಗಿ) ರವರು ಆಗಮಿಸಿದ್ದರು. ಬಳಗದ ಬಗ್ಗೆ ಅಭಿಮಾನದ ಮಾತುಗಳನ್ನಾಡಿದ ಮುಖ್ಯ ಅತಿಥಿ ಶ್ರೀ ಜೋಗಿಯವರು ಕಿರಿಯರಿಗೆ ಹಿತನುಡಿಗಳನ್ನು ಹೇಳಿದರು. ಮಕ್ಕಳು ಕೇವಲ ಪುಸ್ತಕದ ಹುಳುಗಳಂತೆ ಓದಿ, ಅತ್ಯಧಿಕ ಅಂಕಗಳನ್ನು ಪಡೆಯುವುದನ್ನೇ ಜೀವನದ ಅಂತಿಮ ಗುರಿಯೆಂದು ಭಾವಿಸದೆ, ಸಾಂಸ್ಕೃತಿಕ, ಕ್ರೀಡೆ ಹಾಗೂ ಕೌಟುಂಬಿಕ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡು ಸರ್ವಾಂಗೀಣ ಬೆಳವಣಿಗೆಯನ್ನು ಸಾಧಿಸಬೇಕೆಂದು ಹೇಳಿ ಹಾಗಾದರೇನೆ ಮಾತ್ರಾ ಮುಂದೆ ಜೀವನವನ್ನು ಎದುರಿಸುವ ಶಕ್ತಿ ಬರುತ್ತದೆ ಎಂದು ತಿಳಿಸಿದರು. ಅಧ್ಯಕ್ಷರ



ಮಾತಿನಲ್ಲಿಯೂ ಬಳಗದ ಜವಾಬ್ದಾರಿ ಹಾಗೂ ಯಶಸ್ಸಿನ ವಿಚಾರಗಳೇ ತುಂಬಿದ್ದವು. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಯಲ್ಲಿ ಹೆಚ್ಚು ಅಂಕ ಗಳಿಸಿದ ಬಳಗದ ಪ್ರತಿಭಾವಂತ ಮಕ್ಕಳಿಗೆ ಎಂದಿನಂತೆ ಪ್ರತಿಭಾ ಪುರಸ್ಕಾರ ಭೀಮಾ ಜ್ಯುವೆಲರ್ಸ್‌ನ ಪ್ರಾಯೋಜಕತ್ವದಲ್ಲಿ ನಡೆದರೆ, ಜುಲೈ 28 ರಂದು ಆನಂದ ಬಳಗದ ಮಕ್ಕಳಿಗೆ ನಡೆಸಲಾದ ವಿವಿಧ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ವಿತರಣೆಯೂ ವೇದಿಕೆಯ ಮೇಲಿದ್ದ ಗಣ್ಯರ ಮೂಲಕ ಅಚ್ಚುಕಟ್ಟಾಗಿ ನೆರವೇರಿತು. ಬಹುಮಾನ ವಿತರಣೆ ಹಾಗೂ ಪ್ರತಿಭಾ ಪುರಸ್ಕಾರವನ್ನು ಕ್ರಮವಾಗಿ ಶ್ರೀಮತಿ ದೀಪ್ತಿ ಹಾಗೂ ಶ್ರೀಮತಿ ಪಲ್ಲವಿಯವರು ಯಶಸ್ವಿಯಾಗಿ ನಡೆಸಿಕೊಟ್ಟರು. (ಪ್ರತಿಭಾ ಪುರಸ್ಕೃತರ ಹಾಗೂ ಬಹುಮಾನ ವಿಜೇತರ ಪಟ್ಟಿ ಪ್ರತ್ಯೇಕವಾಗಿ ನೀಡಲಾಗಿದೆ) ಸಭಾ ಕಾರ್ಯಕ್ರಮದ ನಿರೂಪಣೆ ಕುಮಾರಿ ಮೇಘನಾ ಕಾರಂತ್ ಸಮರ್ಥವಾಗಿ ನಡಿಸಿಕೊಟ್ಟಳು.



ಸಭಾ ಕಾರ್ಯಕ್ರಮದ ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸುಮಾರು 80ಕ್ಕಿಂತಲೂ ಹೆಚ್ಚು ಮಕ್ಕಳು ಭಾಗವಹಿಸಿದ್ದು 10 ವಾರಗಳ ಪರಿಶ್ರಮ ತರಬೇತಿಯ ಮೂಲಕ ತಯಾರಾದ ವಿವಿಧ ಹಾಡು, ನೃತ್ಯ, ರೂಪಕಗಳು ಉದ್ದೇಶಿತ ನೀತಿ ಸಂದೇಶಗಳನ್ನು ಪ್ರೇಕ್ಷರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿವೆ ಎಂಬುವುದು ಹಲವು ಹಿರಿಯರ ಬಾಯಲ್ಲಿ

ಕೇಳಿಬಂದ ಮಾತು. ರೈತರ ಜೀವನದಲ್ಲಿ ಕಂಡುಬರುವ ವಿಷಯಗಳಾದ ಪರಿಸರದ ಮೇಲಿನ ಅವಲಂಬನೆ ನಿರಂತರ ಪರಿಶ್ರಮ. ಸೋಲು, ಗೆಲುವು ಅವರಲ್ಲಿರುವ ಮುಗ್ಧತೆ ಹಾಗೂ ಬದ್ಧತೆ ಇವೆಲ್ಲವುಗಳನ್ನೂ ವಿವಿಧ ನೃತ್ಯಗಳ ಮೂಲಕ ಪ್ರದರ್ಶಿಸಿದರೆ, ಯೋಧರ ಜೀವನದಲ್ಲಿ ಹಾಸು ಹೊಕ್ಕಾಗಿರುವ ದೇಶಪ್ರೇಮ, ಸಾಹಸ, ಶಿಸ್ತು, ತ್ಯಾಗ, ದುರಂತ, ದುಗುಡ ಇವೆಲ್ಲವೂ ಮನಮುಟ್ಟುವಂತೆ ಪ್ರದರ್ಶಿಸಲ್ಪಟ್ಟವು. ವಯಸ್ಸಿನಲ್ಲಿ ಕಿರಿಯರಾದರು ಭಾವಾವೇಶಗಳ ಸನ್ನಿವೇಶ ಗಳನ್ನು ಪರಿಣಾಮಕಾರಿಯಾಗಿ ಮನಮುಟ್ಟುವಂತೆ ಪ್ರದರ್ಶಿಸಲು ತರಬೇತಿ ನೀಡಿ ತಯಾರು ಮಾಡಿದ ಗುರು ಅಲಂಕೃತ ಬಾಲಕೃಷ್ಣ ಹಾಗೂ ಪೃಥ್ವಿಯವರ ಪರಿಶ್ರಮ ಹಾಗೂ ಕಲಾನೈಪುಣ್ಯ ನಿಜವಾಗಿಯೂ ಪ್ರಶಂಸನೀಯ.

ಪ್ರತಿಯೊಂದು ಕಾರ್ಯಕ್ರಮದ ಮುನ್ನ ಸೂಕ್ತ ನಿರೂಪಣೆಯ ಮೂಲಕ ಪ್ರೇಕ್ಷಕರ ಮನಸ್ಸನ್ನು ಸಿದ್ಧಪಡಿಸಿ, ಕುತೂಹಲ ಹುಟ್ಟಿಸಿ ಸಾಂಸ್ಕೃತಿಕ ಕಾರ್ಯಕ್ರಮದ ಮೆರಗು ಹೆಚ್ಚಿಸಿದ ಹೆಗ್ಗಳಿಕೆ, ಸ್ವಾರಸ್ಯಕರವಾಗಿ ಮಾತಾಡಬಲ್ಲ ನಿರೂಪಣೆ ಕುಮಾರಿ ತುಷಾರ ಅವಳದು.

ಎಂದಿನಂತೆ ಈ ಬಾರಿಯೂ ಶ್ರೀಯುತ ಭಾಸ್ಕರ ರಾಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎಲ್ಲಾ ಮಕ್ಕಳಿಗೂ ಪ್ರೀತಿಯ ನೆನಪಿನ ಕಾಣಿಕೆ ನೀಡಿ ಹುರಿದುಂಬಿಸಿದರೆ ಶ್ರೀಯುತ ಯು.ವಿ. ಕೃಷ್ಣಮೂರ್ತಿ ಯವರು ಕಾರ್ಯಕ್ರಮಕ್ಕೆ ಬಂದವರೆಲ್ಲರಿಗೂ ರುಚಿಕರ ಉಪಾಹಾರದ ಆತಿಥ್ಯ ನೀಡಿದರು ಹಾಗೂ ಬ್ರಾಹ್ಮಿನ್ಸ್ ಬೇಕರಿಯ ಮಾಲಿಕರು ಮಕ್ಕಳಿಗೆ ವಿಶೇಷ ತಿನಿಸುಗಳನ್ನೂ ಒದಗಿಸಿದರು. ಸಭಾ ಕಾರ್ಯಕ್ರಮದ ಆರಂಭದಲ್ಲಿ ಸ್ವಾಗತ ಭಾಷಣವನ್ನು ಕುಮಾರಿ ಪರ್ಣಿಕಾ ಉಡುಪ, ಮುಖ್ಯ ಅತಿಥಿಗಳ ಪರಿಚಯವನ್ನು ಕು. ಸ್ಫೂರ್ತಿ ಭಟ್ ಹಾಗೂ ಈ ಕಾರ್ಯಕ್ರಮದ ಯಶಸ್ಸಿಗೆ ಕೈಜೋಡಿಸಿ ವಿವಿಧ ರೀತಿಗಳಲ್ಲಿ ಸಹಕಾರ ನೀಡಿದ ಎಲ್ಲರಿಗೂ ವಂದನಾರ್ಪಣೆಯನ್ನು ಕುಮಾರಿ ಆರಭಿ ಭಟ್ ಯಶಸ್ವಿಯಾಗಿ ನಿರ್ವಹಿಸಿಕೊಟ್ಟರು.

ಒಟ್ಟಾರೆ ಕಾರ್ಯಕ್ರಮವು ಎಲ್ಲರ ಮನಮೆಚ್ಚುವಂತೆ ಮೂಡಿಬಂದು ಎಲ್ಲರ ಪ್ರಶಂಸೆಗೆ ಪಾತ್ರವಾದರೂ ಮೇಲ್ನೋಟಕ್ಕೆ ಹಲವರ ಗಮನಕ್ಕೆ ಬರದೇ ಇರುವಂತಹ ನೇಪಥ್ಯದ ಕೆಲವು ತೊಡಕುಗಳು ಇದ್ದೇ ಇರುವುದು ಸರ್ವೇ

**(ಪುಟ 15ರಲ್ಲಿ ಮುಂದುವರೆದಿದೆ)**

# ಪ್ರತಿಭಾ ಪುರಸ್ಕೃತರು

| ಕ್ರ.ಸಂ. | ವಿದ್ಯಾರ್ಥಿಯ ಹೆಸರು | ತಂದೆ/ತಾಯಿಯ ಹೆಸರು ಶ್ರೀ/ಶ್ರೀಮತಿ | ಪಡೆದಿರುವ ಅಂಕ (ಶೇಕಡ) |
|---|---|---|---|
| (ಎ) ಎಸ್.ಎಸ್.ಎಲ್.ಸಿ. / 10ನೇ ತರಗತಿ | | | |
| 1 | ಅತ್ತೂರು ವೈಷ್ಣವಿ | ಸುಬ್ರಹ್ಮಣ್ಯ ಉಡುಪ ಎ.ಆರ್. | 91.00 |
| 2 | ಐಶ್ವರ್ಯ ವಿ. ಭಟ್ | ವೇಣುಗೋಪಾಲ್ ಭಟ್ | 91.50 |
| 3 | ಪ್ರಜ್ಞಶ್ರೀ ಪಿ. ಹತ್ವಾರ್ | ಪ್ರಸನ್ನ ಕುಮಾರ್ ಟಿ.ಎಸ್. | 92.00 |
| 4 | ಆಯುಷ್ ಹೆಬ್ಬಾರ್ | ವೆಂಕಟೇಶ್ ಕೆ.ಹೆಚ್ | 93.00 |
| 5 | ದೀಕ್ಷಾ ಎಂ. ಆಚಾರ್ಯ | ಮುರಳೀಧರ ಆಚಾರ್ಯ | 93.20 |
| 6 | ನೇಹಾ ಕೆ | ಕೆ.ಪಿ. ಶ್ರೀರಾಮಚಂದ್ರ | 93.33 |
| 7 | ನೈಜ ಯು. ರಾವ್ | ರವಿಕಿರಣ್ | 94.00 |
| 8 | ಶ್ರೀಹರಿ ಸರಳಾಯ | ವಿಷ್ಣುಮೂರ್ತಿ ಸರಳಾಯ | 95.04 |
| 9 | ಮಾನಸ ಯು | ರಮೇಶ್ ಯು | 95.16 |
| 10 | ಹರ್ಷಿತಾ ಹೆಬ್ಬಾರ್ ಎಂ.ಸಿ. | ಚೇತನ್ ಎಂ. ರಾಘವೇಂದ್ರ | 95.60 |
| 11 | ಅಕ್ಷತಾ ಬಿ.ಎಸ್. | ಸುನಂದ ಕೆ.ಜಿ. | 96.36 |
| 12 | ಪ್ರದ್ಯುಮ್ನ ಬಿ. ಆಚಾರ್ಯ | ಜಿ. ವೆಂಕಟರಾಜ್ | 96.40 |
| 13 | ಧಾರಿಣಿ ಕೆ.ಎನ್. ಹತ್ವಾರ್ | ನಾಗೇಶ್ ಹತ್ವಾರ್ | 96.60 |

| | | | |
|---|---|---|---|
| 14 | ಅದಿತಿ ಕೊರ್ನಾಯ | ರಾಜೇಶ್ .ಎನ್ | 96.64 |
| 15 | ವೈಭವಿ ರಾವ್ | ವೇಣುಗೋಪಾಲರಾವ್ | 97.20 |
| 16 | ಮಾನಸ ಪಿ.ಎಸ್. | ಸುಬ್ರಹ್ಮಣ್ಯ ಬಾಯಿರಿ | 97.60 |
| 17 | ಸನತ್ ಕೃಷ್ಣಾಪುರ್ | ಸಂದೀಪ್ ಕೃಷ್ಣಾಪುರ್ | 97.67 |
| 18 | ಪ್ರಕೃತಿ ಸಿ. ಹೇರ್ಳೆ | ಚೆನ್ನ ಕೇಶವ ಹೇರ್ಳೆ | 97.76 |
| 19 | ಶ್ರೀಕರ ಯು. ಭಟ್ | ಉಮೇಶ್ ಭಟ್ | 97.92 |
| 20 | ಪ್ರಥಮ್ ಜಿ. ರಾವ್ | ಗಣೇಶ್‌ರಾವ್ | (10ನೇ ರ‍್ಯಾಂಕ್) 98.56 |
| 21 | ವೈಷ್ಣವಿ .ವಿ | ವೇಣುಗೋಪಾಲ್ ಕೆ.ವಿ. | (7ನೇ ರ‍್ಯಾಂಕ್) 99.04 |
| 22 | ಮೇಘನಾ ಎನ್. | ಆನಂದರಾಮ ಮಧ್ಯಸ್ಥ | (4ನೇ ರ‍್ಯಾಂಕ್) 99.52 |

**(ಬಿ) ದ್ವಿತೀಯ ಪಿ.ಯು.ಸಿ – ವಿಜ್ಞಾನ**

| | | | |
|---|---|---|---|
| 1 | ಸೂರಜ್ ಉರಾಳ ಎಂ.ಎಸ್. | ಎಂ.ಆರ್. ಶಾಮಸುಂದರ್ | 89.83 |
| 2 | ಗಗನ್ ಕಾರಂತ್ ಎನ್. | ಗಿರೀಶ್ ಕುಮಾರ್ ಎನ್. | 91.50 |
| 3 | ಕೃಷ್ಣಪ್ರಸಾದ್ ಕುದ್ದಣ್ಣಾಯ | ಪ್ರಕಾಶ್ ಕುಮಾರ್ ಪಿ.ಎ. | 92.00 |
| 4 | ನಿಶಾಂತ್ ಅಡಿಗ ಎಂ. | ಮುರಳೀಧರ ಅಡಿಗ ಪಿ. | 92.17 |
| 5 | ಶ್ರೀನಿಧಿ ಭಟ್ ಎನ್.ಆರ್. | ರವಿರಾಜ ಎನ್. | 92.33 |
| 6 | ರಿತ್ವಿಕ್ ಐತಾಳ್ ಪಿ. | ಪಿ. ವೆಂಕಟೇಶ್ ಐತಾಳ್ | 93.00 |
| 7 | ವೈಭವ್ ಕೆ. ಆಚಾರ್ಯ | ಸುರೇಂದ್ರ ಕೆ.ಹೆಚ್. | 93.50 |
| 8 | ಪ್ರತೀಕ್ಷಾ ರಾವ್ | ಪ್ರಕಾಶ ರಾವ್ ಟಿ. | 95.30 |
| 9 | ಸಿಂಚನಾ ಆರ್. | ಕೆ. ರಮೇಶ್ ಹತ್ವಾರ್ | 95.50 |
| 10 | ಅಪೇಕ್ಷಾ ವಿ. | ವಾಸುದೇವ ಭಟ್ | 95.83 |
| 11 | ನಿಖಿಲ್ ಕೊರ್ನಾಯ ಎನ್. | ಸುರೇಶ್ ಎನ್. | 96.00 |
| 12 | ಕಾರ್ತಿಕ್ ಭಟ್ .ಎಂ | ಕೆ.ವಿ. ಮಂಜುನಾಥ | 96.16 |
